ಬೆಳಕು ಚೆಲ್ಲಿತು. ಕುಸುಮ ಭಯದಿಂದ ಕುಳಿತಲ್ಲೇ ಮರಗಟ್ಟಿಹೋಗಿದ್ದಳು. ಒಂದು ಕ್ಷಣ! ಅಕಸ್ಮಾತ್ತಾಗಿ ಆ ಅಪರಿಚಿತ ವ್ಯಕ್ತಿಗೂ, ರಾಮಚಂದ್ರನಿಗೂ ಮಾರಾಮಾರಿಯಾಗಿ, ಅಚಾನಕ್ಕು ನಡೆಯಬಾರದ್ದು ನಡೆದು ಹೋಗಿ... ಆ ವ್ಯಕ್ತಿ ರಾಮಚಂದ್ರನನ್ನು ಸಾಯಿಸಿ... ಪೊಲೀಸ್ ಸ್ಟೇಷನ್ನಿನಲ್ಲಿ ಒಬ್ಬ ದಢೂತಿ ಇನ್ಸ್‌ಪೆಕ್ಟರು, ಅವನ ಸಹಾಯಕ ರಾಮಚಂದ್ರನನ್ನು ಹಿಗ್ಗಾಮುಗ್ಗ ಹೊಡೆದು ಹಿಂಸಿಸಿ... ಇವೆಲ್ಲ ಚಿತ್ರಗಳೂ ಆ ಒಂದೇ ಒಂದು ಕ್ಷಣದ ಅವಳ ಕಲ್ಪನೆಯ ಲೋಕದಲ್ಲಿ ಹುಟ್ಟಿ, ಕುಸುಮ ವಾಸ್ತವಕ್ಕೆ ಬಂದಾಗ ಇದು ತನ್ನೊಳಗೆ ಹೇಗೆ ಬಂದಿತು ಅಂತ ಆಶ್ಚರ್ಯ ಮತ್ತು ಭಯವಾಯಿತು. ಯೋಚಿಸಿದಾಗ, ಅವಳಿಗೆ ಇವೆಲ್ಲ ಕಲ್ಪನೆಗಳು ಇತ್ತೀಚೆಗೆ ನೋಡಿದ 'ದೃಶ್ಯ' ಸಿನಿಮಾದಿಂದ ಪ್ರೇರಿತಗೊಂಡಿದ್ದು ಅನ್ನುವುದು ತಕ್ಷಣ ಹೊಳೆಯಿತು. ಯಾಕೆಂದರೆ ಆ ಸಿನಿಮಾದ ಪೊಲೀಸ್ ಪೇದೆ ಪಾತ್ರಧಾರಿ ಅಚ್ಯುತ ಕುಮಾರ್ ಅಭಿನಯ ಎಷ್ಟೋ ದಿನಗಳವರೆಗೆ ಅದೆಷ್ಟು ಅವಳನ್ನು ಕಾಡಿತ್ತು ಅಂದರೆ ಪೊಲೀಸರ ಬಗೆಗೆ ಅವಳ ಒಳಗಿದ್ದ ಭಯವನ್ನು ನೂರ್ಮಡಿಗೊಳಿಸುವಷ್ಟು! 'ಅದು ನಿಜ ಅಲ್ಲ, ಅಭಿನಯ' ಅಂತ ತನ್ನ ಮನಸ್ಸಿಗೆ ಕುಸುಮ ಎಷ್ಟೋ ಬಾರಿ ತಿಳಿ ಹೇಳಿದರೂ ಅವಳ ಮನಸ್ಸು ಯಾವ ಪಾಠವನ್ನೂ ಒಳತೆಗೆದುಕೊಳ್ಳದ ಬಂಡೆಕಲ್ಲಿನಂತಾಗಿತ್ತು. ಆ ಸಿನಿಮಾ ನೋಡಿ ಥಿಯೇಟರಿನಿಂದ ಆಚೆ ಬಂದ ಕೂಡಲೆ ಅನ್ನಿಸಿದಂತೆ, 'ಒಂದು ತಪ್ಪಿಗೆ ಎಷ್ಟೆಲ್ಲ ಚಾಣಾಕ್ಷತೆಯಿಂದ ಮುಸುಗು ಹಾಕಿ, ಅದನ್ನು ಮುಚ್ಚಿ ಹಾಕಿ ಹೇಗೆ ಚಂದಕ್ಕೆ ಭಾಸವಾಗುವ ರೀತಿಯಲ್ಲಿ ಸಿನಿಮಾ ಮಾಡಿದರೆ ಅದು ತಪ್ಪಲ್ವಾ?' ಅಂತ ಈಗಲೂ ಅನ್ನಿಸಿತು. ಅದೇ ಆಲೋಚನೆ ಈಗ ಮುಂದುವರೆದು 'ಒಂದು ತಪ್ಪನ್ನು ಮುಚ್ಚಿಹಾಕುವುದು ತಪ್ಪು, ಜೊತೆಗೆ ಒಳ್ಳೆಯ ಉದ್ದೇಶಕ್ಕೆ ಹಾಗೆ ಮುಚ್ಚಿಹಾಕುವುದು ತಪ್ಪಲ್ಲ ಅಂತ ತೋರಿಸುವುದೂ ತಪ್ಪು' ಅಂತಲೂ ಅನ್ನಿಸುತ್ತಿರುವಾಗ ಕುಸುಮಳ ಮನಸ್ಸಿನ ಓಟವನ್ನು ರಾಮಚಂದ್ರನ ಮಾತು ಥಟ್ಟನೆ ನಿಲ್ಲಿಸಿತು:

'ಇವರೇ... ಲಿಂಗದಹಳ್ಳಿ ಎಷ್ಟು ದೂರ ಇದೆ ಅಂದ್ರಿ..!'

ಹಿಂಬದಿಯ ಸೀಟಿನಿಂದ 'ಇಲ್ಲೇ ಸಾ ಇನ್ನೊಂದೆರಡು ಮೈಲು...' ಎನ್ನುವ ಗಡುಸು ಧ್ವನಿ ಬಂತು. ಮತ್ತೆ ಮೌನ. ಹಿಂಬದಿಯ ಸೀಟಿನ ಆ ಮನುಷ್ಯ ಮಾತು ಮುಂದುವರಿಸಲಿಲ್ಲ. ರಾಮಚಂದ್ರನಿಗೆ ಹಿಂಸೆಯಾಗತೊಡಗಿತು. ಅವನ ಪ್ರಜ್ಞೆಯ ಹರಿವು ಈಗ ದಿಕ್ಕುದೆಸೆಯಿಲ್ಲದೆ ನುಗ್ಗತೊಡಗಿತ್ತು... ಕವಲು ದಾರಿಯಿಂದ ಈಗಾಗಲೇ ಸುಮಾರು ದೂರ ಬಂದಾಗಿದೆ... ಈ ಬಡ್ಡಿಮಗ ನೋಡಿದ್ರೆ ಇನ್ನೂ ಒಂದೆರಡು ಮೈಲು ಅನ್ತಾ ಇದ್ದಾನೆ. ದಾರಿಯಲ್ಲಿ ದೂರದೂರಕ್ಕೆ ನರಮನುಷ್ಯನ ಸುಳಿವೂ ಇಲ್ಲ. ಕತ್ತಲು ಮುತ್ತುತಾ ಇದೆ. ಇವನೇನಾದರೂ ಸುಳ್ಳು ಹೇಳಿದನೋ ಹೆಂಗೆ? ನಾವು ಬರ್ತಾ ಇರೋದು ಸರಿಯಾದ ರಸ್ತೆಯೋ ಅಲ್ಲವೋ? ಹೇಗೆ ತಿಳಿದುಕೊಳ್ಳೋದು? ಸಂತೋಷ ಈ ದಾರಿಯಲ್ಲಿ ಹೋಗಲು ಹೇಳಿದ್ದು ಯಾತಕ್ಕೆ? ಅವನ ಅಂತಃಪ್ರಜ್ಞೆಗೆ ಇಂತದ್ದೇನಾದರೂ ನಡೆಯುತ್ತೆ ಅಂತ ಮೊದಲೇ ಅನ್ನಿಸಿತ್ತಾ? ಒಂದು ವೇಳೆ ಈ ವ್ಯಕ್ತಿ ಏನಾದರೂ ನಮ್ಮ ಮೇಲೆ ಆಕ್ರಮಣ ಮಾಡಿದರೆ ನಾನು ಏನು ಮಾಡಬೇಕು? ಅವನನ್ನು ಹೇಗೆ ಎದುರಿಸಬೇಕು? ಥೂ... ಯಾವ ಸುಳಿಯಲ್ಲಿ ಸಿಕ್ಕಿ ಹಾಕಿಕೊಂಡೆನಪ್ಪಾ ನಾನು... ಸಾ... ನಿಲ್ಸಿ ನಿಲ್ಸಿ ಇದೆಯ ಲಿಂಗದಳ್ಳಿ!

ಕಡೆಯ ಸಾಲು ತನ್ನದೇ ಮನಸ್ಸಿನ ಕಲ್ಪನೆಯೋ, ಹೊರಗಿಂದ ಬಂದದ್ದೋ ಅಂತ ರಾಮಚಂದ್ರನಿಗೆ ಗಲಿಬಿಲಿಯಾಗಿ ಅವನ ಕಾಲು ಛಕ್ಕನೆ ಬ್ರೇಕ್ ಒತ್ತಿತು. ಇದ್ದಕ್ಕಿದ್ದಂತೆ ಹಾಕಿದ ನಿಲುಗಡೆಗೆ ಕಾರಿನ ಚಕ್ರಗಳು ಸ್ಪಂದಿಸಲು ಹೆಣಗಾಡುತ್ತ ಟಯರು ಜರ್ರ್... ಸದ್ದು ಮಾಡಿ ನಿಂತವು. ಟಾರು ರಸ್ತೆಗೆ ಟಯರು ಉಜ್ಜಿದ ಸುಟ್ಟ ವಾಸನೆ ಮೂಗಿಗೆ ಗಪ್ಪನೆ ಬಡಿಯಿತು. ಕಾರಿನ ಹಿಂಬದಿಯ ಬಾಗಿಲು ತೆರಕೊಂಡಿತು. ಮುಚ್ಚಿತು. ಆ ವ್ಯಕ್ತಿ, 'ಇಂಗೆ ನೆಟ್ಟಗೋಗಿ ಸಾ... ನಿಮ್ಮ ದಾರಿ ಇದು' ಎನ್ನುತ್ತ ಕೈ ಮಾಡಿ ತೋರಿ, ಬಾಯಿಗೆ ಬೀಡಿ ಇಟ್ಟು ಬೆಂಕಿಕಡ್ಡಿ ಹತ್ತಿಸಿದ. ಅವನ ಮುಖ ಆ ಬೆಳಕಲ್ಲಿ ಸ್ಪಷ್ಟವಾಗಿ ಗೋಚರಿಸಿತು. ಇಬ್ಬರ ಕಣ್ಣುಗಳೂ ಆ ಕಿರುಬೆಳಕಿನಲ್ಲಿ ಒಮ್ಮೆ ಸಂಧಿಸಿದವು. ಅಪರಿಚಿತ ವ್ಯಕ್ತಿಯ ಕಣ್ಣಲ್ಲಿ ಸಣ್ಣ ನಗುವೊಂದು ತೇಲಿ ಮಾಯವಾಯಿತು. ಬೆಂಕಿಕಡ್ಡಿಯ ಬೆಳಕು ಕ್ಷಣಮಾತ್ರದಲ್ಲಿ ನಂದಿತು. ಆ ವ್ಯಕ್ತಿಯು ಅತ್ತೆಡೆ ತಿರುಗಿಕೊಂಡು ಹೊಗೆ ಬಿಟ್ಟು, ಶಿಳ್ಳೆ ಹಾಕುತ್ತ ಕಾಲುದಾರಿಯಲ್ಲಿ ಮರೆಯಾದ. ●